ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಕಾಶಿಇ 208 ವರ್ಗಾವಣೆ 2017-18 ವ&ನಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ: 12/05/2017

**ಸುತ್ತೋಲೆ**

ವಿಷಯ: 2017-18 ನೇ ಸಾಲಿನ ಕಾಲೇಜು ಶಿಕ್ಷಣ ಇಲಾಖೆಯ ಬೋಧಕ/ ಗ್ರಂಥಪಾಲಕರು/ ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಬೋಧಕೇತರರ ಕಡ್ಡಾಯ ವರ್ಗಾವಣೆ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: :SAMVYASHAE 69 SHASANA 2012, ದಿನಾಂಕ:08.05.2013.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 154 ಡಿಸಿಇ 2013 ದಿನಾಂಕ:01.07.2014.
3. ಕಛೇರಿಯ ಸಮಸಂಖ್ಯೆ ಸುತ್ತೋಲೆ ದಿನಾಂಕ: 22/04/2017.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(3)ರ ಸುತ್ತೋಲೆಯಲ್ಲಿ ಪ್ರಕಟಿಸಲಾಗಿರುವ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿದ್ದು, ವರ್ಗಾವಣೆಗೆ ಈ ಕೆಳಕಂಡ ಅಂಶಗಳನ್ನು ಪರಿಗಣಿಸಿ ಕಡ್ಡಾಯ ವರ್ಗಾವಣೆಗೆ ಅಂತಿಮ ಜೇಷ್ಠತಾ ಪಟ್ಟಿಗಳನ್ನು ಹಾಗೂ ಲಭ್ಯವಿರುವ ಖಾಲಿಹುದ್ದೆಗಳ ಅಂತಿಮ ಪಟ್ಟಿಯನ್ನು ಈ ಮೂಲಕ ಪ್ರಕಟಿಸಲಾಗಿದೆ:

1. ವಯೋನಿವೃತ್ತಿಗೆ 02 ವರ್ಷಗಳಿರುವ ಸಿಬ್ಬಂದಿಗಳನ್ನು ಕೈಬಿಡುವಾಗ 31/03/2019ರ ಬದಲಾಗಿ, ಮೇ 2017ರಲ್ಲಿ ಕೌನ್ಸಿಲಿಂಗ್ ಪ್ರಕ್ರಿಯೆ ಕೈಗೊಳ್ಳುತ್ತಿರುವುದರಿಂದ ದಿನಾಂಕ: 31/05/2019ರವರೆಗೆ ವಯೋನಿವೃತ್ತಿ ಹೊಂದಲಿರುವವರಿಗೆ ವಿನಾಯಿತಿ ನೀಡಲಾಗಿದೆ.

2. ಮೊದಲು ಕಡ್ಡಾಯ ವರ್ಗಾವಣೆಗಳಲ್ಲಿ ವಿಶೇಷ ಪ್ರಕರಣಗಳ ವರ್ಗಾವಣೆ ಪ್ರಕ್ರಿಯೆಯನ್ನು ಪೂರೈಸಿ, ತದನಂತರದಲ್ಲಿ ಕೋರಿಕೆ ವರ್ಗಾವಣೆಗಳ ಅರ್ಜಿಗಳನ್ನು ಆಹ್ವಾನಿಸಿ, ಅವುಗಳಲ್ಲಿ ವಿಶೇಷ ಪ್ರಕರಣಗಳ ವರ್ಗಾವಣೆಯನ್ನು ಮಾಡಿ ತದನಂತರದಲ್ಲಿ ಕಡ್ಡಾಯ ಹಾಗೂ ಕೋರಿಕೆ ವರ್ಗಾವಣೆಗಳೆರಡಲ್ಲಿಯ ಇತರ ಪ್ರಕರಣಗಳ ಕೌನ್ಸಿಲಿಂಗ್ ಅನ್ನು ಪೂರೈಸಲಾಗುವುದು.

3. ಪ್ರಥಮವಾಗಿ ಕಡ್ಡಾಯ ವರ್ಗಾವಣೆಯಲ್ಲಿನ ವಿಶೇಷ ಪ್ರಕರಣಗಳು, ಅಂದರೆ – ಮಾರಕ ರೋಗವಾದ ಕ್ಯಾನ್ಸರ್ ಅಥವಾ ಹೃದಯ ರೋಗ/ಕಿಡ್ನಿ ತೊಂದರೆಗಳಿಂದ ಬಳಲುತ್ತಿರುವ ಸಿಬ್ಬಂದಿಗಳಿಂದ ಸರ್ಕಾರಿ ವೈದ್ಯರು ನೀಡಿರುವ ಮೂಲ ಪ್ರಮಾಣಪತ್ರಗಳನ್ನು ಪಡೆದು ಅವರುಗಳನ್ನು ಕೌನ್ಸಿಲಿಂಗ್‌ಗೆ ಆಹ್ವಾನಿಸಿ ಮಾನವೀಯತೆಯ ದೃಷ್ಟಿಯಿಂದ ಅವರುಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿಯೇ ಮುಂದುವರೆಯಲು ಇಚ್ಛಿಸಿದಲ್ಲಿ, ಮುಂದುವರೆಯಲು ಅವಕಾಶ ಕೊಡಲು, ಒಂದೊಮ್ಮೆ ಬೇರೆ ಸ್ಥಳವನ್ನು ಆಯ್ಕೆ ಮಾಡಿಕೊಂಡಲ್ಲಿ ವರ್ಗಾವಣೆ ಮಾಡಲಾಗುವುದು. ಅದೇ ಪ್ರಕಾರವಾಗಿ ವಿಕಲಚೇತನ ಮಕ್ಕಳನ್ನು ಹೊಂದಿರುವ ಸಿಬ್ಬಂದಿಗಳ ಪ್ರಕರಣಗಳಲ್ಲಿ ಕೂಡಾ ಕ್ರಮ ತೆಗೆದುಕೊಳ್ಳಲಾಗುವುದು.

4. ಅಂಗವಿಕಲ ಹಾಗೂ ಅಂಧ ಸಿಬ್ಬಂದಿಗಳ ಪ್ರಕರಣಗಳಲ್ಲಿ, ಅವರುಗಳನ್ನು ಕೌನ್ಸಿಲಿಂಗ್‌ಗೆ ಆಹ್ವಾನಿಸಿ ಅವರಿಂದ ಅಂಗವಿಕಲ ಪ್ರಮಾಣಪತ್ರಗಳ ಮೂಲಪ್ರತಿಗಳನ್ನು ಪಡೆದು, ಮಾನವೀಯತೆಯ ದೃಷ್ಟಿಯಿಂದ ಅವರುಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿಯೇ ಮುಂದುವರೆಯಲು ಇಚ್ಛಿಸಿದಲ್ಲಿ, ಮುಂದುವರೆಯಲು ಅವಕಾಶ ಕೊಡಲು, ಒಂದೊಮ್ಮೆ ಬೇರೆ ಸ್ಥಳವನ್ನು ಆಯ್ಕೆ ಮಾಡಿಕೊಂಡಲ್ಲಿ ವರ್ಗಾವಣೆ ಮಾಡಲಾಗುವುದು.

5. ಉಳಿದಂತೆ, ವಿಧವಾ ಮತ್ತು ಪತಿ/ಪತ್ನಿ ಪ್ರಕರಣಗಳಲ್ಲಿ (ಕೇವಲ ರಾಜ್ಯ ಸರ್ಕಾರಿ/ಕೇಂದ್ರ ಸರ್ಕಾರಿ ನೌಕರರುಗಳಾಗಿದ್ದಲ್ಲಿ ಮಾತ್ರ) ಕೌನ್ಸೆಲಿಂಗ್‌ನಲ್ಲಿ ಸ್ಥಳ ಆಯ್ಕೆಗೆ ಅವಕಾಶ ಕಲ್ಪಿಸಲಾಗುವುದು.

6. 371 ಜೆ ರಡಿಯಲ್ಲಿ ಹೈದ್ರಾಬಾದ್ ಕರ್ನಾಟಕ ಸ್ಥಳೀಯ ವೃಂದ ರಚನೆಯ ಸಂದರ್ಭದಲ್ಲಿ ರಾಜಧಾನಿ ಪ್ರದೇಶವಾದ ಬೆಂಗಳೂರಿನಲ್ಲಿ ಶೇ.8ರಷ್ಟು ಹುದ್ದೆಗಳನ್ನು ಹೈದ್ರಾಬಾದ್ ಕರ್ನಾಟಕ ಸ್ಥಳೀಯ ವೃಂದಕ್ಕೆ ಮೀಸಲಿರಿಸಿದ್ದು ಸದರಿ ಹುದ್ದೆಗಳು ಖಾಲಿ ಇಲ್ಲದ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳನ್ನು ಸ್ಥಳಾಂತರಿಸಿ ಹೈದ್ರಾಬಾದ್ ಕರ್ನಾಟಕ ಸ್ಥಳೀಯ ವೃಂದದ ಸಿಬ್ಬಂದಿಗಳನ್ನು ಸದರಿ ಹುದ್ದೆಗಳಲ್ಲಿ ನಿಯುಕ್ತಿಗೊಳಿಸಲು ಕ್ರಮ ಕೈಗೊಳ್ಳಲಾಗಿತ್ತು. ಆದರೆ ಕೆಎಟಿ ತಡೆಯಾಜ್ಞೆ ಸ್ವೀಕೃತವಾದ ಕಾರಣ ಆದೇಶ ಅನುಷ್ಠಾನಗೊಳಿಸಲಾಗಿರುವುದಿಲ್ಲ. 2015-16, 2016-17 ನೇ ಸಾಲಿನ ವರ್ಗಾವಣೆಗಳಲ್ಲಿ ಸದರಿ 8% ಹುದ್ದೆಯನ್ನು ಕೌನ್ಸೆಲಿಂಗ್‌ನಲ್ಲಿ ಪ್ರದರ್ಶಿಸಲಾಗಿರುವುದಿಲ್ಲ. ಅದರಂತೆ ಈ ಸಾಲಿನಲ್ಲಿಯೂ ಖಾಲಿ ಹುದ್ದೆಗಳಲ್ಲಿ ಸದರಿ 8% ಹುದ್ದೆಗಳನ್ನು ಕೌನ್ಸೆಲಿಂಗ್‌ನಲ್ಲಿ ಪ್ರದರ್ಶಿಸಲಾಗುವುದಿಲ್ಲ.

7. ವರ್ಗಾವಣೆ ಅಧಿನಿಯಮದ ನಿಯಮ(3)ರನ್ವಯ ಪ್ರಸ್ತುತ ಇಲಾಖೆಯಲ್ಲಿ ನೇಮಕಾತಿ ಹೊಂದುತ್ತಿರುವ 2160 ಹೊಸ ಸಹಾಯಕ ಪ್ರಾಧ್ಯಾಪಕರುಗಳಿಗೆ 'ಸಿ' ವಲಯದಲ್ಲಿ ನೇಮಕಾತಿಯನ್ನು ನೀಡಬೇಕಾಗಿದ್ದು, ಪ್ರಸ್ತುತ ಸಿ ವಲಯದಲ್ಲಿ ಅಗತ್ಯ ಹುದ್ದೆಗಳನ್ನು ಖಾಲಿ ಮಾಡಲು ಶೇ 8 ರಷ್ಟು ಮಿತಿಯನ್ನು ಮೀರಿ ವರ್ಗಾವಣೆಯನ್ನು ಮಾಡಲು ಸರ್ಕಾರದ ಅನುಮತಿಯನ್ನು ಪಡೆಯಲಾಗಿದ್ದು, ಸರ್ಕಾರದ ಅನುಮತಿಯಂತೆ 'ಸಿ' ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರಿಗೆ 'ಬಿ' ಮತ್ತು 'ಎ' ವಲಯಗಳನ್ನು ಆಯ್ಕೆ ಮಾಡಿಕೊಳ್ಳಲು ಹಾಗೂ 'ಬಿ' ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರುಗಳಿಗೆ 'ಎ' ವಲಯದಲ್ಲಿ ಸ್ಥಳ ಆಯ್ಕೆಗೆ ಕೌನ್ಸಿಲಿಂಗ್‌ನಲ್ಲಿ ಅವಕಾಶ ನೀಡಲಾಗಿದ್ದು, ಇದು ಸಾಮಾನ್ಯ ವರ್ಗಾವಣೆಯ ಮಿತಿಗೆ ಒಳಪಟ್ಟಿರುವುದಿಲ್ಲ. ಆದ್ದರಿಂದ 'ಬಿ' ಮತ್ತು 'ಸಿ' ವಲಯಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಬೋಧಕರ ವರ್ಗಾವಣೆ ಪಡೆಯಲಿಚ್ಚಿಸಿದಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ನಿಗದಿತ ಸಮಯದೊಳಗೆ ಸಲ್ಲಿಸಬಹುದಾಗಿರುತ್ತದೆ.

8. ಪಿಹೆಚ್.ಡಿ ಮಾರ್ಗದರ್ಶಕರಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳ ಪ್ರಕರಣಗಳಲ್ಲಿ ವರ್ಗಾವಣೆ ಪ್ರಕ್ರಿಯೆಯಿಂದ ವಿನಾಯಿತಿ ನೀಡುವ ಸಂಬಂಧ ವರ್ಗಾವಣೆ ಅಧಿನಿಯಮ/ ನಿಯಮಗಳಲ್ಲಿ ಮಾರ್ಗಸೂಚಿಗಳು ಇರುವುದಿಲ್ಲ. ಆದಕಾರಣ, ಈ ಸಂಬಂಧ ವಿಶ್ವವಿದ್ಯಾಲಯಗಳಿಂದ ಸ್ಪಷ್ಟೀಕರಣ/ಅಭಿಪ್ರಾಯವನ್ನು ಕೋರಲಾಗಿದ್ದು, ಅದರನ್ವಯ ತೀರ್ಮಾನವನ್ನು ಕಾಯ್ದಿರಿಸಲಾಗಿದೆ.

9. ಮೇಜರ್ ಹಾಗೂ ಮೈನರ್ ಪ್ರಾಜೆಕ್ಟ್‌ಗಳನ್ನು ಕೈಗೊಂಡಿರುವ ಪ್ರಾಧ್ಯಾಪಕರುಗಳ ಪ್ರಕರಣಗಳಲ್ಲಿ ಪ್ರಾಜೆಕ್ಟ್ ಪಡೆದು 03 ವರ್ಷಗಳಿಗಿಂತ ಕಡಿಮೆ ಅವಧಿಯಾಗಿದ್ದಲ್ಲಿ ಸದರಿ ಅಭ್ಯರ್ಥಿಗಳು ಸಂಬಂಧಿಸಿದ ದೃಢೀಕೃತ ದಾಖಲಾತಿಗಳನ್ನು ಸಲ್ಲಿಸಿದಲ್ಲಿ, ವಿನಾಯಿತಿ ನೀಡಲಾಗುವುದು.

ಈ ಮೇಲ್ಕಂಡ ನಾಲ್ಕು **ವಿಶೇಷ ಪ್ರಕರಣಗಳನ್ವಯ** (ಕ್ರ.ಸಂ. 3, 4 ಹಾಗೂ 5ರ ಅಂಶಗಳಲ್ಲಿ ವಿವರಿಸಿರುವಂತೆ) ಆದ್ಯತೆ ಕೋರಿ ಈಗಾಗಲೇ ಮನವಿ ಸಲ್ಲಿಸಿರುವ ಸಿಬ್ಬಂದಿಗಳ ಪಟ್ಟಿಯನ್ನು ವರ್ಗಾವಣೆ ಅಧಿನಿಯಮಗಳನುಸಾರ ಅನುಬಂಧ-1ರಲ್ಲಿ ನೀಡಲಾಗಿದ್ದು, ಸದರಿ ಬೋಧಕರುಗಳಿಗೆ (ರಾಜ್ಯ ವೃಂದ ಮತ್ತು ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದದ ಬೋಧಕ/ಗ್ರಂಥಪಾಲಕರು/ದೈಹಿಕ ಶಿಕ್ಷಕರುಗಳ ವಿಶೇಷ ಪ್ರಕರಣಗಳು) ದಿನಾಂಕ: 15/05/2017ರಂದು ಕೌನ್ಸಿಲಿಂಗ್ ನಡೆಸಲಾಗುವುದು. ವಿವರಗಳು ಕೆಳಕಂಡಂತಿವೆ:

| | |
|---|---|
| **ಕೌನ್ಸಿಲಿಂಗ್ ದಿನಾಂಕ** | 15/05/2017 |
| **ಸ್ಥಳ** | ಸರ್ಕಾರಿ ವಿಜ್ಞಾನ ಕಾಲೇಜು ಸಭಾಂಗಣ, ನೃಪತುಂಗ ರಸ್ತೆ, ಬೆಂಗಳೂರು. |
| **ಸಮಯ** | ಬೆಳಗ್ಗೆ 11.00 |

*circular transfer 17-18.doc*

**ಸೂಚನೆ:**

1. **ಕೌನ್ಸಿಲಿಂಗ್‌ಗೆ ಆಹ್ವಾನಿಸಲಾಗಿರುವ ಅಭ್ಯರ್ಥಿಗಳು ಮಾತ್ರವೇ ಸ್ಥಳದಲ್ಲಿ ಹಾಜರಿರತಕ್ಕದ್ದು.**
2. **ಎರಡು ವರ್ಷದೊಳಗಿನ ಮಕ್ಕಳನ್ನು ಹೊಂದಿರುವ ಬೋಧಕರುಗಳಿಗೆ ಮಾತ್ರ ಜೊತೆಗೆ ಒಬ್ಬರನ್ನು ಕೌನ್ಸಿಲಿಂಗ್ ಸ್ಥಳದಲ್ಲಿ ಕರೆತರಲು ಅವಕಾಶ ನೀಡಿದೆ.**

2017-18ನೇ ಸಾಲಿನ ವರ್ಗಾವಣೆ ಕೌನ್ಸಿಲಿಂಗ್ ವೇಳಾಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿರುತ್ತದೆ. ಸದರಿ ವೇಳಾಪಟ್ಟಿಯನುಸಾರವಾಗಿ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ನಡೆಸಲಾಗುವುದು. ಪ್ರಕಟಿಸಲಾಗಿರುವ ಅಂತಿಮ ಜ್ಯೇಷ್ಠತಾ ಪಟ್ಟಿಯ ವಿಶೇಷ ಪ್ರಕರಣಗಳಡಿಯಲ್ಲಿ ಬರುವ ಉಪನ್ಯಾಸಕರುಗಳು/ದೈಹಿಕ ಶಿಕ್ಷಕರು/ಗ್ರಂಥಪಾಲಕರುಗಳು ದಿ. 15/05/2017ರಂದು ಕೌನ್ಸಿಲಿಂಗ್‌ಗೆ ಹಾಜರಾಗುವಂತೆ ಹಾಗೂ ಸಾಮಾನ್ಯ ಪ್ರಕರಣಗಳಡಿಯಲ್ಲಿ ಬರುವ ಉಪನ್ಯಾಸಕರುಗಳು/ದೈಹಿಕ ಶಿಕ್ಷಕರು/ಗ್ರಂಥಪಾಲಕರುಗಳು ಅನುಬಂಧದಲ್ಲಿ-2ರಲ್ಲಿ ನೀಡಿರುವ ವೇಳಾಪಟ್ಟಿಯನುಸಾರವಾಗಿ ದಿನಾಂಕ : 17/05/2017 ಹಾಗೂ 18/05/2017ರಂದು ಕೌನ್ಸಿಲಿಂಗ್‌ಗೆ ಹಾಜರಾಗುವಂತೆ ಸೂಚಿಸಿದೆ.

ಕಾಲೇಜು ಶಿಕ್ಷಣ ಆಯುಕ್ತರು

**ಇವರಿಗೆ:**

1. ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ-ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ.
2. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು/ಪ್ರಭಾರಿ ಪ್ರಾಂಶುಪಾಲರುಗಳಿಗೆ – ತುರ್ತು ಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಅಗತ್ಯ ಕ್ರಮಕ್ಕಾಗಿ.
4. ಪ್ರಾಂಶುಪಾಲರು, ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು – ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ.
5. ಕಛೇರಿ ಪ್ರತಿ.

ಅನುಬಂಧ-2

## ಎ.ಕಡ್ಡಾಯ ವರ್ಗಾವಣೆ ವೇಳಾಪಟ್ಟಿ

| ಕ್ರ. ಸಂ | ವಿವರಗಳು | ದಿನಾಂಕ |
|---|---|---|
| 1 | ವಿಶೇಷ ಪ್ರಕರಣಗಳು<br>(ಹೈದ್ರಾಬಾದ್ ಕರ್ನಾಟಕ ಮತ್ತು ರಾಜ್ಯ ವ್ಯಾಪಿ ಉಳಿಕೆ ಮೂಲ ವೃಂದಕ್ಕೆ ಸೇರಿದ ಬೋಧಕರು/ ದೈ.ಶಿ.ನಿರ್ದೇಶಕರು/ಗ್ರಂಥಪಾಲಕರು) | 15/05/2017 |
| 2 | ಸಾಮಾನ್ಯ ಪ್ರಕರಣಗಳು<br>1. ಎ ವಲಯದ ರಾಜ್ಯವ್ಯಾಪಿ ಉಳಿಕೆ ವೃಂದದ ಬೋಧಕರು.<br>2. ಬಿ ವಲಯದ ರಾಜ್ಯ ವ್ಯಾಪಿ ಉಳಿಕೆ ವೃಂದದ ಬೋಧಕರು. | 17/05/2017 |
| 3 | ಸಾಮಾನ್ಯ ಪ್ರಕರಣಗಳು<br>1. ಸಿ ವಲಯದ ರಾಜ್ಯ ವ್ಯಾಪಿ ಉಳಿಕೆ ವೃಂದದ ಬೋಧಕರು.<br>2. ಎ, ಬಿ, ಸಿ ವಲಯಗಳ (ಹೈದ್ರಾಬಾದ್ ಕರ್ನಾಟಕ) ಸ್ಥಳೀಯ ವೃಂದದ ಬೋಧಕರು.<br>3. ಎ, ಬಿ, ಸಿ ವಲಯಗಳ ಹೈದ್ರಾಬಾದ್ ಕರ್ನಾಟಕ ವೃಂದ ಮತ್ತು ರಾಜ್ಯ ವ್ಯಾಪಿ ಉಳಿಕೆ ವೃಂದಗಳ ದೈ.ಶಿ.ನಿರ್ದೇಶಕರು ಮತ್ತು ಗ್ರಂಥಪಾಲಕರು . | 18/05/2017 |

## ಬಿ.ಕೋರಿಕೆ ವರ್ಗಾವಣೆಯ ತಾತ್ಕಾಲಿಕ ವೇಳಾಪಟ್ಟಿ

| ಕ್ರ. ಸಂ | ವಿವರಗಳು | ದಿನಾಂಕ |
|---|---|---|
| 1 | ಅರ್ಜಿಗಳ ಆಹ್ವಾನ | 12/05/2017 ರಿಂದ 18/05/2017 |
| 2 | ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಣೆ | 19-20/05/2017 |
| 3 | ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಅವಧಿ | 20/05/2017 ರಿಂದ 23/05/2017 |
| 4 | ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಣೆ | 25/05/2017 |
| 5 | ವಿಶೇಷ ಪ್ರಕರಣಗಳ ಕೌನ್ಸಿಲಿಂಗ್ **** | 27/05/2017 |
| 6 | ಸಾಮಾನ್ಯ ಪ್ರಕರಣಗಳ ಕೌನ್ಸಿಲಿಂಗ್ (ಶೇ 08 ರ ಮಿತಿಗೊಳಪಟ್ಟು) **** | 28/05/2017 ರಿಂದ 29/05/2017 |
| 7 | ಹೊಸ ನೇಮಕಾತಿಗಳಿಗೆ ಸಿ ವಲಯದ ಹುದ್ದೆಗಳನ್ನು ಖಾಲಿ ಮಾಡುವ ಸಂಬಂಧ ನಡೆಸುವ ಕೌನ್ಸಿಲಿಂಗ್ **** | 30/05/2017 ರಿಂದ 31/05/2017 |

**** ವಿವರವಾದ ವೇಳಾಪಟ್ಟಿಯನ್ನು ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಸಂದರ್ಭದಲ್ಲಿ ಪ್ರಕಟಿಸಲಾಗುವುದು.

circular transfer 17.18.doc

ಅನುಬಂಧ-2

## ಎ.ಕಡ್ಡಾಯ ವರ್ಗಾವಣೆ ವೇಳಾಪಟ್ಟಿ

| ಕ್ರ. ಸಂ | ವಿವರಗಳು | ದಿನಾಂಕ |
|---|---|---|
| 1 | ವಿಶೇಷ ಪ್ರಕರಣಗಳು<br>(ಹೈದ್ರಾಬಾದ್ ಕರ್ನಾಟಕ ಮತ್ತು ರಾಜ್ಯ ವ್ಯಾಪಿ ಉಳಕೆ ಮೂಲ ವೃಂದಕ್ಕೆ ಸೇರಿದ<br>ಬೋಧಕರು/ ದೈ.ಶಿ.ನಿರ್ದೇಶಕರು/ಗ್ರಂಥಪಾಲಕರು) | 15/05/2017 |
| 2 | ಸಾಮಾನ್ಯ ಪ್ರಕರಣಗಳು<br>1. ಎ ವಲಯದ ರಾಜ್ಯವ್ಯಾಪಿ ಉಳಕೆ ವೃಂದದ ಬೋಧಕರು.<br>2. ಬಿ ವಲಯದ ರಾಜ್ಯ ವ್ಯಾಪಿ ಉಳಕೆ ವೃಂದದ ಬೋಧಕರು. | 17/05/2017 |
| 3 | ಸಾಮಾನ್ಯ ಪ್ರಕರಣಗಳು<br>1. ಸಿ ವಲಯದ ರಾಜ್ಯ ವ್ಯಾಪಿ ಉಳಕೆ ವೃಂದದ ಬೋಧಕರು.<br>2. ಎ, ಬಿ, ಸಿ ವಲಯಗಳ (ಹೈದ್ರಾಬಾದ್ ಕರ್ನಾಟಕ) ಸ್ಥಳೀಯ ವೃಂದದ ಬೋಧಕರು.<br>3. ಎ, ಬಿ, ಸಿ ವಲಯಗಳ ಹೈದ್ರಾಬಾದ್ ಕರ್ನಾಟಕ ವೃಂದ ಮತ್ತು ರಾಜ್ಯ ವ್ಯಾಪಿ ಉಳಕೆ ವೃಂದಗಳ ದೈ.ಶಿ.ನಿರ್ದೇಶಕರು ಮತ್ತು ಗ್ರಂಥಪಾಲಕರು . | 18/05/2017 |

## ಬಿ.ಕೋರಿಕೆ ವರ್ಗಾವಣೆಯ ತಾತ್ಕಾಲಿಕ ವೇಳಾಪಟ್ಟಿ

| ಕ್ರ. ಸಂ | ವಿವರಗಳು | ದಿನಾಂಕ |
|---|---|---|
| 1 | ಅರ್ಜಿಗಳ ಆಹ್ವಾನ | 12/05/2017 ರಿಂದ 18/05/2017 |
| 2 | ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಣೆ | 19-20/05/2017 |
| 3 | ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಅವಧಿ | 20/05/2017 ರಿಂದ 23/05/2017 |
| 4 | ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಣೆ | 25/05/2017 |
| 5 | ವಿಶೇಷ ಪ್ರಕರಣಗಳ ಕೌನ್ಸಿಲಿಂಗ್ **** | 27/05/2017 |
| 6 | ಸಾಮಾನ್ಯ ಪ್ರಕರಣಗಳ ಕೌನ್ಸಿಲಿಂಗ್ (ಶೇ 08 ರ ಮಿತಿಗೊಳಪಟ್ಟು) **** | 28/05/2017 ರಿಂದ 29/05/2017 |
| 7 | ಹೊಸ ನೇಮಕಾತಿಗಳಿಗೆ ಸಿ ವಲಯದ ಹುದ್ದೆಗಳನ್ನು ಖಾಲಿ ಮಾಡುವ ಸಂಬಂಧ ನಡೆಸುವ ಕೌನ್ಸಿಲಿಂಗ್ **** | 30/05/2017 ರಿಂದ 31/05/2017 |

****** ವಿವರವಾದ ವೇಳಾಪಟ್ಟಿಯನ್ನು ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಸಂದರ್ಭದಲ್ಲಿ ಪ್ರಕಟಿಸಲಾಗುವುದು.**